ಮುಗುಳ್ನಗುತ್ತ ನುಡಿದ ದೀಪಕ್.

'ಆಕೆ ಹಾರಿ ಬರುವಾಗ ನೀನವಳನ್ನು ಸ್ವಾಗತಿಸುವಂತೆ ಎಡಗೈಯನ್ನು ಗಾಳಿಯಲ್ಲಿ ಆಡಿಸುತ್ತ ಬಲತೋಳನ್ನು ಮುಖದಿಂದ ದೂರ ಹಿಡಿಯಬೇಕಿತ್ತು. ನಿನ್ನ ಕಾಲುಗಳ ಮೇಲೆ ನೀನು ದೃಢವಾಗಿ ಬಲಹಾಕಿ ನಿಲ್ಲಬೇಕಿತ್ತು... ನೀನು ಬಹಳಷ್ಟು ಕಲಿಯಲಿಕ್ಕಿದೆ... ಪರವಾಗಿಲ್ಲ, ನಾನು ಕಲಿಸುತ್ತೇನೆ, ಎಲ್ಲವನ್ನೂ ಬೇಗಬೇಗ ಕಲಿತುಕೊಳ್ಳಬೇಕು...' ಎಂದ ಅರಬಿ ನಗುತ್ತ.

ತನ್ನನ್ನು ಕೆಲಸಕ್ಕೆ ಆಯ್ಕೆಮಾಡುವುದಕ್ಕೆ ಯೋಚಿಸಿದ್ದಾನೆ ಎಂಬ ಸೂಚನೆ ಸಿಕ್ಕಿ ದೀಪಕನಿಗೆ ಧೈರ್ಯ ಬಂತು. ಮನದಲ್ಲೇ ಇಷ್ಟದೈವಗಳನ್ನೆಲ್ಲ ನೆನೆದುಕೊಂಡ.

'ಸರಿ ನಾಳೆಯಿಂದ ಬಾ, ಬೆಳಿಗ್ಗೆ ಹೊತ್ತು ಮೂಡುವ ಮುಂಚೆ ಬೇಗ ಬರಬೇಕು' ಅಂದ ಅರಬಿ.

ಇನ್ನೂ ಸಂಬಳದ ಬಗೆಗೆ ಏನೂ ಮಾತಾಗಿರಲಿಲ್ಲ. ಅಳುಕಿನಿಂದಲೇ 'ನನ್ನ ಸಂಬಳ ಎಷ್ಟು ಎಂದು ನೀವು ತಿಳಿಸಲಿಲ್ಲ' ವಿನಮ್ರನಾಗಿ ಸೂಚಿಸಿದ ದೀಪಕ್.

'ನಾಳೆ ಬಾ, ನೋಡೋಣ. ಬೆಳಿಗ್ಗೆ ಅಜಾನ್ ಮುಗಿಯುವಷ್ಟರಲ್ಲಿ ನೀನು ಇಲ್ಲಿ ಇರಬೇಕು... ನಾವು ಬೇಗ ಹೊರಡಬೇಕು, ಇಲ್ಲವಾದಲ್ಲಿ ತರಬೇತಿ ಮುಗಿಸಿ ಹಿಂತಿರುಗುವಾಗ ಕತ್ತಲಾಗುತ್ತೆ' ಅಂದರಾತ. ಸಂಬಳದ ಬಗ್ಗೆ ಇನ್ನೊಮ್ಮೆ ಮಾತಾಡಿದರೆ ಕೋಪಗೊಳ್ಳುತ್ತಾನೋ ಏನೋ ಎಂದು ಮತ್ತೆ ಪುನಃ ಕೇಳಲು ಹಿಂಜರಿದು ಸರಿಯೆನ್ನುವಂತೆ ತಲೆಯಾಡಿಸಿದ್ದ. ಕೆಲವು ಅರಬಿಗಳು ಹಾಗೆಯೇ. ಮುಂಗೋಪ ಜಾಸ್ತಿ. ಆಳುಕಾಳುಗಳು ತಮ್ಮ ಅಭಿಪ್ರಾಯ, ಅಸಹನೆ ಪ್ರಕಟಿಸಬಾರದು. ಪ್ರಶ್ನೆಗಳನ್ನು ಕೇಳಬಾರದು. ಏನೂ ಕೆಲಸವಿಲ್ಲದಿದ್ದರೂ ಕರೆದಾಗ ಬರುವಂತೆ ಸದಾ ಸಜ್ಜಾಗಿರಬೇಕು. ಸಂಬಳದ ಬಗ್ಗೆ ಮಾತುಕತೆಯಾಗದೆ ಸಂದರ್ಶನ ಮುಗಿಸಿ ರೂಮಿಗೆ ಹಿಂದಿರುಗಿದ್ದ ದೀಪಕ್ ಕೆಲಸ ಸಿಕ್ಕಿದ ಸಂತೋಷವನ್ನೂ ಅನುಭವಿಸಲಾಗದೆ ಸಪ್ಪೆಯಾಗಿ ಕುಳಿತಿದ್ದ.

'ಐದುಗಂಟೆಗೆ ಅಜಾನ್. ಅಷ್ಟು ಬೇಗ ಅಲ್ಲಿಗೆ ಹೋಗಬೇಕಿದ್ದರೆ ನೀನು ನಾಲ್ಕೂವರೆಗೆ ಇಲ್ಲಿಂದ ಹೊರಟು ಟ್ಯಾಕ್ಸಿ ಹಿಡಿದು ಹೋಗಬೇಕು. ದಿನಾ ಹೀಗೆಯೇ ಅಂದರೆ ಆಗುವ ಹೋಗುವ ಸಂಗತಿಯಲ್ಲ. ನೀನು ಅಲ್ಲೇ ಹತ್ತಿರ ನಡೆದು ಹೋಗುವಷ್ಟು ಸಮೀಪದಲ್ಲಿ ಬೇರೆ ರೂಮು ನೋಡಬೇಕು. ಟ್ಯಾಕ್ಸಿ ಬಾಡಿಗೆ ಅಥವಾ ರೂಮು ಬಾಡಿಗೆ ಯಾವುದಾದರೊಂದು ಹೆಚ್ಚುವರಿಯಾಗಿ ಕೊಡಲೇಬೇಕಾಗಿ ಬರುತ್ತೆ. ಸಿಗುವ ಸಂಬಳದಲ್ಲಿ ಮತ್ತೆ ನಿನಗೇನು ಉಳಿಯುತ್ತದೆ ಎನ್ನುವುದೇ ಪ್ರಶ್ನೆ' ಅಂದರು ರೂಮಿನಲ್ಲಿದ್ದವರು. 'ಅರಬಿಯ ಮನೆಯಲ್ಲಿ ಕೆಲಸ... ಆಫೀಸು ನೌಕರಿಯಷ್ಟು ಸುಲಭವಲ್ಲ... ಯಾವುದಕ್ಕೂ ನಾಳೆ ಕೆಲಸಕ್ಕೆ ಹಾಜರಾಗು, ಸಂಬಳ ಎಷ್ಟು ಕೊಡುತ್ತಾರೆ ಏನು ಕತೆ ನೋಡಿಕೊಂಡು ಬಾ, ಆಮೇಲೆ ಕೆಲಸಕ್ಕೆ ಹೋಗಬೇಕೋ ಬೇಡವೋ ನಿರ್ಧರಿಸೋಣವಂತೆ' ಎಂದರು ಚಿಕ್ಕಣ್ಣ.

ಚಿಕ್ಕಣ್ಣನ ಅನುಭವದ ಮಾತು ಅನುಸರಿಸಿ ಮರುದಿನ ಬೆಳಗ್ಗೆ ಬೇಗ ಎದ್ದು ಹೊರಟಿದ್ದ. ಮೂಡಲ ಸೂರ್ಯ ಮೇಲಕ್ಕೇಳುವ ಮೊದಲೇ ದೀಪಕ್ ಅರಬಿಯ ಮನೆಯ ಗೇಟಿನ ಬಳಿ ಬಂದಿದ್ದ. ಹತ್ತಿರ ಯಾರೂ ಸುಳಿದಾಡುವುದು ಕಾಣಿಸಲಿಲ್ಲ. ಅಲ್ಲೇ ಗೇಟಿನ ಬಳಿ ಕಾಯುತ್ತ ನಿಂತ. ಸ್ವಲ್ಪ ಹೊತ್ತಿನಲ್ಲಿ ಅಬ್ದುಲ್ಲ ಅರಬಿಯ ದೊಡ್ಡ ಎಸ್ ಯೂ ವಿ ವಾಹನದ ಮೆಟ್ಟಲೇರಿ ಮೇಲ್ಹಾವಣಿ ತೊಳೆಯುತ್ತಿರುವುದು ಕಾಣಿಸಿತು. ದೀಪಕ್ ಅತ್ತ ನಡೆದ. ದೀಪಕನನ್ನು ನೋಡಿದ ಅಬ್ದುಲ್ಲ ತನ್ನ ಹೆಗಲಿನ ಮೇಲೆ ಹಾಕಿಕೊಂಡಿದ್ದ ಇನ್ನೊಂದು ಬಟ್ಟೆತುಂಡನ್ನು ಇವನೆಡೆಗೆ ಬಿಸಾಡಿ